Indian Journal of History and Archaeology

ISSN (E):2582-225X
VOL-2, ISSUE -4,NOVEMBER-DECEMBER, 2020, 15-26

# ಗ್ರಾಮದೇವತೆಗಳ ಪಾರಂಪರಿಕ ಜಾನಪದೀಯ ಅಧ್ಯಯನ

**ಪುರುಷೋತ್ತಮ**

ಪುರುಷೋತ್ತಮ
ಸಂಶೋಧಕರು,
ಕರ್ನಾಟಕ ಜಾನಪದ
ವಿಶ್ವವಿದ್ಯಾಲಯ, ಗೊಟಗೋಡಿ
ಹಾವೇರಿ ಜಿಲ್ಲೆ.

ಆಧುನಿಕ ಜಗತ್ತಿನಲ್ಲಿ ನಾಗರೀಕತೆಯ ಸಮಾಜದ ಬೆಳವಣಿಗೆಗೆ ಗ್ರಾಮ ದೇವತೆಗಳು ಜನಪದರ ಬದುಕಿನ ಅತಿ ಮುಖ್ಯ ಭಾಗವಾಗಿದ್ದು, ಎಲ್ಲಾ ಗ್ರಾಮಗಳಲ್ಲಿ ಗ್ರಾಮದೇವತೆಗಳಿಗೆ ವಿಶಿಷ್ಟವಾದ ಸ್ಥಾನ ನೀಡಿ ಆರಾಧಿಸುತ್ತಾರೆ. ಶಿಷ್ಟ ಗ್ರಾಮದೇವತೆಗಳಿಗಿಂತಲೂ ಮಹತ್ತರವಾದ ಸ್ಥಾನವನ್ನು ಗ್ರಾಮ ದೇವತೆಗಳು ಪಡೆದಿವೆ. ಆದಿ ಮಾನವ ಕಾಲದಿಂದಲೂ ಮಾನವರು ಹೆದರುವುದು ದೈವಗಳಿಗೆ ಮಾತ್ರ. ಆದಿ ಮಾನವರು ಪ್ರಕೃತಿಯನ್ನು ದೇವರೆಂದು ಭಾವಿಸಿ, ಆರಾಧಿಸಿದರೆ ಆಧುನಿಕರು ತಾವು ಕಲ್ಪಿಸಿಕೊಟ್ಟಂತಹ ದೈವಗಳಿಗೆ ಮೂರ್ತ ರೂಪ ನೀಡಿ ಆರಾಧಿಸುತ್ತಿದ್ದಾರೆ. ಹಿಂದೆ ಇಂದು ಎರಡು ಕಾಲದಲ್ಲೂ ಆರಾಧನಾ ವಿಧಿ ವಿಧಾನಗಳು ಇದ್ದವು. ಆದರೆ ಅದರಲ್ಲಿನ ಆರಾಧನಾ ರೂಪ ಇತ್ತೀಚಿನ ದಿನಗಳಲ್ಲಿ ಬದಲಾವಣೆಗೊಂಡಿವೆ ಅಷ್ಟೇ. ಮಾನವರು ಮನೋಧರ್ಮಕ್ಕೆ ತಕ್ಕಂತೆ ದೈವಗಳು ಆರಾಧನೆಯ ಬದಲಾಗಿ ಅವರ ಜೀವನಕ್ಕೆ ಒಂದು ಸ್ಥಿರತೆಯನ್ನು ತಂದು ಕೊಟ್ಟಿದೆ. ಸಂಪ್ರಾದಾಯ, ನಂಬಿಕೆ, ವೈಭವ, ಶ್ರದ್ಧೆ, ಭಕ್ತಿ, ಭಾವೈಕ್ಯತೆ ಈ ಮೊದಲಾದವು ವಾಸ್ತವಿಕ ಅರ್ಥವನ್ನು ಮನಗಾಣಬೇಕಾದರೆ ಗ್ರಾಮೀಣ ಪ್ರದೇಶಗಳಲ್ಲಿ ಇಂದಿಗೂ ನಡೆದು ಬರುತ್ತಿರುವ ಗ್ರಾಮದೇವತೆಗಳ ಹಬ್ಬ, ಆಚರಣೆಗಳು ದಿವ್ಯ ದರ್ಶನಕ್ಕೆ ಲಗ್ಗೆ ಹಾಕಬೇಕು. ಗ್ರಾಮೀಣ ಜೀವನದಲ್ಲಿ ಅನಾದಿ ಕಾಲದಿಂದಲೂ ಬೆರೆತು ಬಂದಿರುವ ಗ್ರಾಮದೇವತೆಗಳು ಜನಪದ ಬದುಕಿನ ಒಂದು ಭಾಗವಾಗಿದೆ. ಜಾನಪದ ಸಂಸ್ಕೃತಿ, ಅರ್ಥ ವ್ಯವಸ್ಥೆ, ಸಾಮಾಜಿಕ ಸ್ಥಿತಿಗಳನ್ನು ಅಧ್ಯಯನ ಮಾಡುವವರು ಗ್ರಾಮದೇವತೆಗಳನ್ನು ಅಗತ್ಯವಾಗಿ ಗಮನಿಸಬೇಕಾಗುತ್ತದೆ. ಒಂದು ದೇವತೆಗೆ ಸಂಬಂಧಿಸಿದ ಹಾಡು, ಕಥೆ, ಐತಿಹ್ಯ, ದಂತಕಥೆ, ಪುರಾಣಗಳಲ್ಲಿ ಆಯಾ ಜನಾಂಗದ ಹಲವು ಸಮಸ್ಯೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಸಾಧ್ಯವಿದೆ.

ಒಂದು ನಿರ್ದಿಷ್ಟ ದೇವತೆಯ ಸಮಗ್ರ ಅಧ್ಯಯನವನ್ನು ಆ ದೇವತೆಯನ್ನು ಪೂಜಿಸುವ ಜನರ ಜೀವನ ರೀತಿ, ಚಿಂತನೆ ವಿಧಾನಗಳು ಅನಾವರಣಗೊಳ್ಳುತ್ತಾ ಹೋಗುತ್ತವೆ. ಜ್ಞಾನದ ವಿವಿಧ ಶಾಖೆಗಳು ಅಂದರೆ ಇತಿಹಾಸ, ಸಮಾಜಶಾಸ್ತ್ರ, ಭಾಷಾಶಾಸ್ತ್ರ ಇನ್ನಿತರ ಶಿಸ್ತುಗಳು ಈ ಸಂಶೋಧನೆಯ ಉದ್ದೇಶವಾಗಿದೆ.

ನಮ್ಮ ಕನ್ನಡನಾಡಿನ ಸಂಸ್ಕೃತಿಯ ಬದುಕನ್ನು ತಬ್ಬಿ ನಿಂತಿರುವ ಪ್ರತಿಯೊಂದು ಹಳ್ಳಿಗಳಲ್ಲಿಯೂ ಗ್ರಾಮದೇವತೆಯ ದೇವಾಲಯಗಳಿರುವುದು ಸರ್ವೇ ಸಾಮಾನ್ಯ. ನಮ್ಮ ಹಳ್ಳಿಗಳ ಬದುಕು ಒಂದು ರೀತಿಯಲ್ಲಿ ಈ ದೇವಾಲಯಗಳ ಸುತ್ತಲೇ ತಳುಕು ಹಾಕಿಕೊಂಡಿರುವುದು ವಿಶೇಷವೆನಿಸಿದೆ. ಪೂರ್ವದಲ್ಲಿ ಮಾನವರ ಬದುಕು ಹೇಗಿತ್ತು ಈಗ ಹೇಗೆ ಪರಿವರ್ತನೆಗೊಂಡಿದೆ ಎಂಬುದನ್ನು ನಿಷ್ಪಕ್ಷಪಾತವಾಗಿ ಹೇಳುವುದು ಹಾಗೆಯೇ ಜನ ಜೀವನ ಹೇಗೆ ಪರಿವರ್ತನೆಗೆ ಹೊಂದಿಕೊಂಡು ಬಂದಿತ್ತೆಂಬುದನ್ನು ತಿಳಿಸುವುದು ಈ ಸಂಶೋಧನೆಯ ಉದ್ದೇಶವಾಗಿದೆ. ಈಗ ಬದುಕಿಗೆ ಹೊಸ ಹೊಸ ಅಂಶಗಳು ಸೇರ್ಪಡೆಯಾಗುತ್ತಿರುವ ಕಾಲ ಆದುದರಿಂದ ಈ ಹಿಂದೆ ಆಗಿ ಹೋದುದರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ಅರ್ಥಮಾಡಿ ಇವತ್ತಿನ ಜನಾಂಗಕ್ಕೆ ವಿವರಿಸುವ ಪ್ರಯತ್ನ ಇದಾಗಿದೆ. ಈ ವಿಶಿಷ್ಟ ಪ್ರಪಂಚದಲ್ಲಿ ಈ ದೇವತೆಗಳ ಹುಟ್ಟು ವಿಕಾಸ ಅವುಗಳ ವಿವಧ ಬಗೆಯ ಆಚರಣೆಗಳು ಹಾಗೂ ದೇವತೆಗಳನ್ನು ಒಲಿಸಿಕೊಳ್ಳಲು ಹುಟ್ಟಿಕೊಂಡ ಹಬ್ಬಗಳು, ಜಾತ್ರೆಗಳು, ಆಚರಣೆಗಳು, ವಿಧಿ–ವಿಧಾನಗಳು, ನಿಷೇಧಗಳು, ನಂಬಿಕೆ, ಸಂಪ್ರದಾಯಗಳ ವೈವಿದ್ಯಮಯವಾಗಿದ್ದು ಅಭ್ಯಾಸ ಯೋಗ್ಯವಾಗಿದೆ. ಗ್ರಾಮದೇವತೆಗಳ ಹಿನ್ನೆಲೆಯಲ್ಲಿ ಒಡಮೂಡಿದ ಧರ್ಮ, ಇದರ ಸುತ್ತ ಹೆಣೆದಿರುವ ಪುರಾಣ, ಐತಿಹ್ಯಗಳು, ನಂಬಿಕೆ ಆಚರಣೆ, ಕಟ್ಟು ಕಟ್ಟಳೆಗಳು, ಹಬ್ಬ–ಹುಣ್ಣಿಮೆಗಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನತೆಯಿಂದ ಕೂಡಿರುತ್ತದೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ, ಕೌಟುಂಬಿಕ ಜೀವನ ವಿಧಾನವನ್ನು ನಿಯಂತ್ರಿಸುವ ಮಾನಸಿಕ ಪ್ರಕ್ರಿಯೆಯನ್ನು ಅರಿಯುವ ಪ್ರಯತ್ನವನ್ನು ಮಾಡಲಾಗುವುದು.

**ಗ್ರಾಮದೇವತೆಯ ಪರಿಕಲ್ಪನೆ ಮಾತೃದೇವತಾ ಪಂಥದ ಚಾರಿತ್ರಿಕ ಹಿನ್ನೆಲೆ** :

ಮಾತೃದೇವತಾ ಪಂಥದ ಜನಪದ ರೂಪಗಳೇ ಗ್ರಾಮದೇವತೆಗಳು. ಭಯ, ಭಕ್ತಿ, ಭೀತಿಯಿಂದ ಹುತ್ತ, ವೃಕ್ಷ, ಶಿಲೆಗಳನ್ನು ಆರಾಧಿಸುತ್ತಿದ್ದ ಗ್ರಾಮೀಣರು ಒಂದು ಕಾಲಘಟ್ಟದಲ್ಲಿ ಅವುಗಳಲ್ಲಿ ಗ್ರಾಮದೇವತೆಗಳನ್ನು ಕಂಡುಕೊಂಡರು. ತಮ್ಮ ಜೀವನದ ಅನುಭವದಿಂದಲೇ ಹುಟ್ಟಿದ ಪುರಾಣ ಕಥೆಗಳನ್ನು ಅವುಗಳಿಗೆ ಜೋಡಿಸಿದರು. "ಅನೇಕ ಗ್ರಾಮದೇವತೆಗಳು ಅತಿ ಪ್ರಾಚೀನವಾದ ಭೂಮಿಪೂಜೆ ಅಥವಾ ಮಾತೃಪೂಜೆಯ ಕುರುಹುಗಳಲ್ಲದೆ ಬೇರೆಯಲ್ಲಿ ಕೆಲವೊಮ್ಮೆ ಅವು ಫಲಶಕ್ತಿಯ ಸ್ಪಷ್ಟ ಪ್ರತೀಕಗಳಂತೆ ಕಾಣುತ್ತವೆ. ಅರಣ್ಯ ವಾಸಿಗಳಾದ ಬುಡಕಟ್ಟು ಜನಾಂಗಗಳು ಪೂಜಿಸುವ ಪ್ರೇತಾತ್ಮಗಳು ಗ್ರಾಮ ಸಮುದಾಯಗಳು ಬೆಳೆದ ಮೇಲೆ ಗ್ರಾಮ ದೇವತೆಗಳಾಗಿ ಮಾರ್ಪಾಟು ಹೊಂದಿರುವ ಸಾಧ್ಯತೆಗಳಿವೆ.

ಅಥವಾ ಐತಿಹಾಸಿಕ ಕಾಲದಲ್ಲಿ ನಡೆದ ಕೆಲವು ಘಟನೆಗಳು ಹಾಗೂ ಅಕಸ್ಮಿಕಗಳು ಕೂಡ ಇಂಥ ದೇವತೆಗಳನ್ನು ಸೃಷ್ಟಿಸಿರಬಹುದು. ಕೆಲವೊಮ್ಮೆ ಕಾಲುಜಾರಿ ಬಿದ್ದು ಅಥವಾ ಸಿಡಿಲು ಬಡಿದು ಅಥವಾ ಇತರ ಅಕಸ್ಮಿಕಗಳಿಗೆ ಸಿಕ್ಕು ಅಪಮೃತ್ಯುವಿಗೆ ತುತ್ತಾಗಬಹುದು. ಇನ್ನೂ ಹಲವಾರು ಬಗೆಗಳಲ್ಲಿ ನಿರಪರಾಧಿಗಳು ಸಾಯಬಹುದು. ಹೀಗೆ ಸತ್ತವರ ಪ್ರೇತಾತ್ಮಗಳು ಜನರಲ್ಲಿ ಭಯ ಭಕ್ತಿಯನ್ನು ಹುಟ್ಟಿಸಿ ಅವರಿಂದ ಪೂಜೆಯನ್ನು ಪಡೆಯಬಹುದು". ಇದರ ಜೊತೆಗೆ ಚಾರಿತ್ರಿಕ ವ್ಯಕ್ತಿಗಳು ಮೃತರಾದ ನಂತರ ಹಲವು ವರ್ಷಗಳು ಕಳೆದಂತೆ ಗ್ರಾಮ ದೇವತೆಗಳೆನಿಸಿಕೊಳ್ಳಬಹುದು. ಗ್ರಾಮ ದೇವತೆಗಳ ಉಗಮದ ಇತಿಹಾಸವನ್ನು ಸ್ಪಷ್ಟಪಡಿಸ ಬೇಕಾದರೆ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯ ಪರಿಣಾಮಗಳನ್ನು ಪರಿಶೀಲಿಸುವುದು ಮುಖ್ಯವಾಗುತ್ತದೆ.

ಭಾರತದಲ್ಲಿ ಕೃಷಿ ಆರ್ಥಿಕ ಚಟುವಟಿಕೆಯಾಗಿ ರೂಪುಗೊಳ್ಳುವುದರ ಜೊತೆಗೆ ಶಾಕ್ತ ಪಂಥವು ತಲೆ ಎತ್ತಿತ್ತು. ಸೆಮಿಟಿಕ್ ಜನಾಂಗದಲ್ಲಿ ಬೆಳೆದ ಅಷ್ಟಾರ್ಟ್ ದೇವತೆಯ ಕಲ್ಪನೆ, ಈಜಿಪ್ಟ್‌ನಲ್ಲಿ ರೂಪುಗೊಂಡ ಇಸಿಸ್ ದೇವತೆಯ ಕಲ್ಪನೆ, ಫ್ರಿಜಿಯಾದಲ್ಲಿ ಸಿಬಿಲೇ ದೇವತೆಯ ಕಲ್ಪನೆ ಭಾರತದ ಶಕ್ತಿ ದೇವತೆಯ ಕಲ್ಪನೆಗೆ ಸಮಾನ ಪರಿಕಲ್ಪನೆಗಳಾಗಿವೆ. ಶಾಕ್ತ ಧರ್ಮವು ದೇವತೆಯನ್ನು ಪ್ರಪಂಚದ ಮೂಲ ಶಕ್ತಿಯ ಸಾಕಾರ ರೂಪವನ್ನಾಗಿ, ಲೋಕದ ದೈವಿಕ ಮತ್ತು ಜೈವಿಕ ಬೆಳವಣಿಗೆಯ ಮೂಲ ಶಕ್ತಿಯನ್ನಾಗಿ ಪರಿಗಣಿಸುತ್ತದೆ. ಕೃಷಿ ಜನಾಂಗವೊಂದರ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯ ಪರಿಣಾಮವೇ ಇದಾಗಿರಬೇಕು. ಪ್ರಾಚೀನ ಸಮಾಜಗಳಲ್ಲಿ ಮುಕ್ತ ಲೈಂಗಿಕತೆಯಿದ್ದು ಆಯಾ ಗುಂಪುಗಳ ಸ್ತ್ರೀಯರ ಮೂಲಕ ನಿಯಂತ್ರಿಸಲ್ಪಡುತ್ತಿದ್ದುದರಿಂದ ಆಗ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಜಾರಿಯಲ್ಲಿತ್ತು. ಮಕ್ಕಳಿಗೆ ಹೆತ್ತ ತಾಯಿಯನ್ನು ಮಾತ್ರ ಗುರುತಿಸಲು ಸಾಧ್ಯವಿದ್ದುದು ಈ ವ್ಯವಸ್ಥೆಯ ಹುಟ್ಟಿಗೆ ಕಾರಣವಿರಬೇಕು.

ಮನುಷ್ಯನ ಪ್ರಥಮ ಆರ್ಥಿಕ ಚಟುವಟಿಕೆಯಾದ ಆಹಾರ ಸಂಗ್ರಹಣೆಯ ಹಂತದಲ್ಲಿ ಸ್ತ್ರಿಯ ಪಾತ್ರ ಪ್ರಧಾನವಾಗಿತ್ತು. ಮಕ್ಕಳನ್ನು ಹೆರುವುದಲ್ಲದೆ ಅವರನ್ನು ಪಾಲನೆ ಮಾಡುವ ಮತ್ತು ಬೆಳೆಸುವ ಹೊಣೆಗಾರಿಕೆ ಅವಳದಾಗಿತ್ತು. ಎಲ್ಲ ಪದ್ಧತಿಗಳು ಮತ್ತು ಸಾಂಸ್ಕೃತಿಕ ಲಕ್ಷಣಗಳು ಹೆಣ್ಣಿನ ಮೂಲಕವೇ ಸಂವಹನಗೊಳ್ಳುತ್ತಿದ್ದವು. ಹೆಣ್ಣು ಒಂದು ಜನಾಂಗದ ಸಂಕೇತವಷ್ಟೇ ಅಲ್ಲ ಜೀವೋತ್ಪತ್ತಿಯ ಮೂಲ ಶಕ್ತಿಯಾಗಿದ್ದಳು. ಆಕೆಯ ಅಂಗಾಂಗಗಳು ಮತ್ತು ಗುಣ ಶಕ್ತಿಗಳಿಗೆ ಸ್ಪಷ್ಟ ಶಕ್ತಿಯ ಸಾಮರ್ಥ್ಯವಿದೆಯೆಂದು ಭಾವಿಸಲಾಯಿತು. ಅವುಗಳನ್ನು ಚೈತನ್ಯ ಶಕ್ತಿಯ ಸಂಕೇತಗಳೆಂದು ತಿಳಿಯಲಾಯಿತು. ಸಮಾಜದ ಬೆಳವಣಿಗೆಯ ಮೊದಲ ಹಂತದಲ್ಲಿ ಮಾತೃವೇ ಧರ್ಮದ ಕೇಂದ್ರ ಸ್ಥಾನದಲ್ಲಿದ್ದಳು. ಆಹಾರ ಸಂಗ್ರಹಣೆ ಮತ್ತು ಆಹಾರದ ಉತ್ಪಾದನೆ ಸ್ತ್ರೀಯ ಕರ್ತವ್ಯವಾಗಿತ್ತು. ಇದರಿಂದ ಸ್ತ್ರೀಯ ಸ್ಥಾನಮಾನ ಹೆಚ್ಚಿತು. ಈ ಮಾನ್ಯತೆ ಅವಳನ್ನು ದೈವತ್ವಕ್ಕೇರಿಸುವವರೆಗೆ ಹೋಯಿತು. ಮಾತೃ ಪ್ರಧಾನ ವ್ಯವಸ್ಥೆಯು ಪ್ರಪಂಚದ

ಯಾವುದೇ ಭಾಗಕ್ಕಿಂತ ಗುಣ ಮತ್ತು ಪ್ರಮಾಣ ಎರಡರಲ್ಲೂ ಭಾರತ ದೇಶದಲ್ಲಿ ವಿಫುಲವಾಗಿತ್ತೆಂದು ವಿದ್ವಾಂಸರು ಭಾವಿಸುತ್ತಾರೆ. ಭಾರತದಲ್ಲಿ ಈ ಸ್ತ್ರೀ ಮಾನ್ಯತೆಯು ಕೃಷಿಯ ಆರಂಭದ ಹಂತದೊಡನೆ ಸಂಬಂಧ ಹೊಂದಿದೆ. ವೇದಪೂರ್ವ ಕಾಲದ ಜನರ ಆರ್ಥಿಕ ಚಟುವಟಿಕೆಯು ಕೃಷಿಯಾಗಿತ್ತು. ಕೃಷಿಯು ಆರ್ಥಿಕ ಚಟುವಟಿಕೆಯಾಗಿದ್ದು ವಿಶ್ವದ ಎಲ್ಲಾ ಜನಾಂಗಗಳಲ್ಲಿ ಮಾತೃ ದೇವತೆಯು ಅಗ್ರಮಾನ್ಯಳಾದಂತಹ ಧಾರ್ಮಿಕ ಪಂಥಗಳು ಸೃಷ್ಟಿಯಾದವು. ಭಾರತ ದೇಶದಲ್ಲಿ ಶಾಕ್ತ ಪಂಥದ ಉದಯಕ್ಕೆ ಕಾರಣವಾದ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಅಂಶಗಳೇ ವಿವಿಧ ದೇಶಗಳ ಸಮೃದ್ಧಿ ಪಂಥಗಳ ಹುಟ್ಟಿಗೆ ಕಾರಣವಾಗಿವೆ ಎನ್ನಬಹುದು. ಏಕೆಂದರೆ ಶಾಕ್ತ ಆಚಾರಗಳು ಪ್ರಧಾನವಾಗಿ ಕೃಷಿಯ ಉತ್ಪನ್ನಗಳ ಸಮೃದ್ಧಿಗಾಗಿ ಹುಟ್ಟಿಕೊಂಡಿವೆ. ಈ ಸಾಂಸ್ಕೃತಿಕ ಹಂತದಲ್ಲಿ ಆಸ್ತಿಯ ಹಕ್ಕು ಹೆಣ್ಣಿನ ಒಡೆತನಕ್ಕೆ ಒಳಪಟ್ಟಿದ್ದು ಕೌಟುಂಬಿಕ ತಲೆಮಾರುಗಳು ಹೆಣ್ಣಿನ ಕಡೆಯಿಂದಲೇ ಗುರುತಿಸಲ್ಪಡುತ್ತಿದ್ದವು. ಕೃಷಿಯನ್ನು ಕಂಡುಹಿಡಿದದ್ದು ಹೆಣ್ಣು ಎಂದು ಬಹುಪಾಲು ಮಾನವಶಾಸ್ತ್ರಜ್ಞರು ಒಪ್ಪುತ್ತಾರೆ. ಗಂಡು ಬೇಟೆಗೆ ಹೋಗಿದ್ದಾಗ ಆಹಾರ ಸಂಗ್ರಹಣೆಯನ್ನೂ ಗೃಹಕೃತ್ಯವನ್ನೂ ನೋಡಿಕೊಳ್ಳುತ್ತಿದ್ದ ಹೆಣ್ಣು ಬೀಜವು ಗಿಡವಾಗುವ ಪವಾಡವನ್ನು ಮೊದಲು ಕಂಡಳು. ಕೈಗುದ್ದಲಿಯಿಂದ ತೋಟ ಕೃಷಿಯನ್ನು ಆರಂಭ ಮಾಡಿದ ಹಿರಿಮೆ ಹೆಣ್ಣಿನದಾಗುತ್ತದೆ. ಪ್ರಾರಂಭದ ಕೃಷಿಕಳಾಗಿದ್ದ ಹೆಣ್ಣು ಸಮೃದ್ಧಿಗೋಸ್ಕರ ನಡೆಯುವ ಕೃಷಿಯ ಆಚರಣೆಗಳನ್ನು ನಡೆಸಿಕೊಂಡುವ ಹೊಣೆಗಾರಿಕೆಯನ್ನೂ ಹೊತ್ತಳು.

ಹೆಣ್ಣಿನ ಗರ್ಭಧಾರಣೆ ಮತ್ತು ಭೂಮಿಯ ಸಸ್ಯಧಾರಣೆ ಇವೆರಡಕ್ಕೂ ಸಾಮ್ಯತೆಯನ್ನು ಕಂಡುಕೊಂಡ ಆದಿಮಾನವ ಹೆಣ್ಣು ಮತ್ತು ಭೂಮಿ ಇವೆರಡೂ ಪೂಜ್ಯ ವಸ್ತುಗಳೆಂದೂ ಭಾವಿಸಿದ. ಸಮೃದ್ಧಿಯ ಆಚರಣೆಯಾಗಿ ಮಾತ್ರ ರೂಪುಗೊಂಡಿತು. ಇದರ ಮುಂದುವರೆದ ರೂಪವೇ ಶಾಕ್ತಪಂಥ. ಪ್ರಪಂಚದ ಯಾವುದೇ ಸಂಸ್ಕೃತಿಯಲ್ಲಿ ಕೃಷಿಯ ಆರಂಭದ ಕಾಲದಲ್ಲಿ ಹುಟ್ಟಿದ ಈ ಧರ್ಮವು ಒಂದೇ ಮೂಲ ಆಶಯವನ್ನು ಹೊಂದಿದ್ದು ಆಯಾ ಪ್ರದೇಶಕ್ಕೆ ಅನುಗುಣವಾಗಿ ವೈಲಕ್ಷಣಗಳನ್ನು ಹೊಂದಿರುತ್ತದೆ. ಕೃಷಿಯ ಆರಂಭ ಚರಿತ್ರೆಯಲ್ಲಿ ಹೆಣ್ಣಿನ ಸ್ಥಾನಮಾನಗಳನ್ನು ಗಮನಾರ್ಹವಾಗಿ ಬದಲಾವಣೆ ಮಾಡಿತಲ್ಲದೇ ಅನೇಕ ಸ್ತ್ರೀ ದೇವತೆಗಳ ಹುಟ್ಟಿಗೆ ಕಾರಣವಾಯಿತು. ಈಗಾಗಲೇ ಇದ್ದ ಸ್ತ್ರೀ ದೇವತೆಗಳು ಪ್ರವರ್ಧಮಾನಕ್ಕೆ ಬರಲು ಪೂರಕವಾಯಿತು. ಸ್ತ್ರೀಯನ್ನು ಕುರಿತು ಪೂಜ್ಯಭಾವನೆಯ ಜೊತೆಗೆ ಪ್ರಪಂಚದ ಎಲ್ಲ ದೇವರುಗಳು ಶಕ್ತಿಯಿಂದ ಸೃಷ್ಟಿಯಾದವು ಎಂಬ ನಂಬಿಕೆ ಬೆಳೆಯತೊಡಗಿತು. ಜಗದಂಬೆ, ಜಗನ್ಮಾತೆ ಈ ಪರಿಕಲ್ಪನೆಗಳು ಜನಮನದಲ್ಲಿ ಗಟ್ಟಿಯಾದವು. ಶಕ್ತಿಯು ಚಿರ ಕನ್ಯೆಯೆಂದೂ ಗರ್ಭಧರಿಸದೆಯೇ ದೇವರುಗಳನ್ನು ಜನ ಸಮುದಾಯವನ್ನು ಸೃಷ್ಟಿಸಿದಳೆಂದೂ ಪುರಾಣ ಕಥೆಗಳು ಹುಟ್ಟಿಕೊಂಡವು. ಅನೇಕ ಸಂಸ್ಕೃತಿಗಳಲ್ಲಿ ಸ್ತ್ರೀ ದೇವತೆ ತನ್ನ ಗಂಡನಾಗುವವನನ್ನು ಸೃಷ್ಟಿಸಿದವಳಾಗಿದ್ದಾಳೆ. ಆಕೆ ತನ್ನ ಮಗ ಅಥವಾ ತನಗಿಂತ

ಕಿರಿಯನಾಗಿ ಕಾಣುವ ಪುರುಷ ದೇವತೆಯ ಜೊತೆಯಲ್ಲಿ ನಿಂತಿರುವ ಚಿತ್ರಗಳು ಜಗತ್ತಿನಾದ್ಯಂತ ಕಂಡುಬರುತ್ತವೆ. ಇಸಿಸ್ ದೇವತೆಯ ಹೊರಸ್ ಜೊತೆಯೂ, ಅಷ್ಟಾರ್ಟ್ ದೇವತೆ ಟಾಮ್ಮುಜಿಯೊಂದಿಗೂ, ಸಿಬಿಲೆ ದೇವತೆ ಅಟ್ಟಿಸ್‌ನೊಡನೆಯೂ ನಿಂತಿರುವುದು ಇದಕ್ಕೆ ಸಾಕ್ಷಿಯಾಗಿದೆ. ಹೀಗೆ ಮಾತೃ ದೇವತೆಗೆ ಮದುವೆ ಇಲ್ಲ. ಈಕೆಯ ಕನ್ಯತ್ವ ಚಿರಂತನವಾದದ್ದು. ತನ್ನ ಸೃಷ್ಟಿಯಾದ ತನ್ನ ಮಗನೊಂದಿಗೆ ಲೈಂಗಿಕ ಸಂಬಂಧವನ್ನು ಇಟ್ಟುಕೊಳ್ಳುವುದರ ಮೂಲಕ ದೇವತೆಗಳನ್ನೂ, ಮಾನವರನ್ನೂ ಆದಿಶಕ್ತಿಯು ಸೃಷ್ಟಿಸುತ್ತಾಳೆ. ಈ ಬಗೆಯ ಪುರಾಣ ಕಥೆಗಳು ಗಂಡಿನ ಸ್ಥಾನಮಾನ ಹೆಣ್ಣಿಗಿಂತ ಕೆಳಗಿನದಾಗಿದ್ದ ಸ್ಥಿತಿಯನ್ನು ಸೂಚಿಸುತ್ತದೆ. ಕನ್ನಡ ಜನಪದ ಕಾವ್ಯಗಳಾದ ಮಹದೇಶ್ವರ ಮತ್ತು ಮಂಟೇಸ್ವಾಮಿ ಕಥೆಗಳಲ್ಲಿ ಈ ವಿಚಾರಗಳ ಪ್ರಸ್ತಾಪ ಇದೆ. ತ್ರಿಮೂರ್ತಿಗಳನ್ನು ಸೃಷ್ಟಿಸಿದ ಆದಿಶಕ್ತಿಯು ತ್ರಿಮೂರ್ತಿಗಳಲ್ಲಿ ಒಬ್ಬನನ್ನು ವಿವಾಹವಾಗಲೂ ನಡೆಸುವ ಪ್ರಯತ್ನ ಈ ಕಥೆಗಳಲ್ಲಿ ಬಂದಿದೆ.

ಈ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ರೂಪುಗೊಂಡು ಮಾತೃ ದೇವತೆಗಳ ಪ್ರತಿನಿಧಿಗಳಾದ ಗ್ರಾಮ ದೇವತೆಗಳು ಗ್ರಾಮಗಳಲ್ಲಿ ಆರಾಧನೆಗೆ ಒಳಗಾದವು. ಸಮೃದ್ಧಿಯ ಆಚರಣೆಗಳೆಲ್ಲಾ ಸ್ತ್ರೀ ಸಂಬಂಧಿ ಆಚರಣೆಗಳಾದ್ದರಿಂದ ಅನೇಕ ಸಂಸ್ಕೃತಿಗಳಲ್ಲಿ ಗಂಡಿಗೆ ಆಚರಣೆಯ ಹಕ್ಕನ್ನೂ ಆಚರಣೆಯ ಸ್ಥಳಕ್ಕೆ ಪ್ರವೇಶವನ್ನೂ ನಿರಾಕರಿಸಲಾಗಿದೆ. ಮಾನವನ ಜೀವನ ವಿಧಾನ ಬದಲಾದಂತೆ ಕೃಷಿಯ ಮುಂದುವರೆದ ಘಟ್ಟದಲ್ಲಿ ಗಂಡು ಮಹತ್ವದ ಸ್ಥಾನವನ್ನು ಗಳಿಸುತ್ತಾನೆ. ಆಗ ಸಮೃದ್ಧಿಯ ಆಚರಣೆಗಳನ್ನು ನೆರವೇರಿಸುವ ಹೊಣೆಗಾರಿಕೆ ಅವನದಾಗುತ್ತದೆ. ಆದರೆ ಹಿಂದೆ ಆಚರಣೆಗಳು ಹೆಣ್ಣಿನ ಮೇಲ್ವಿಚಾರಣೆಯಲ್ಲಿ ಆಗುತ್ತಿದ್ದವು. ಈ ತೊಡಕನ್ನು ನಿವಾರಿಸಲು ಈ ಗಂಡು ಪೂಜಾರಿಯು ಸ್ತ್ರೀ ವೇಷಧಾರಿಯಾಗುತ್ತಾನೆ. ಗಂಡಿನ ಈ ವರ್ತನೆಯನ್ನು ಸತಿಪತಿ ಭಾವದ ಉದಾಹರಣೆಯೆಂದು ಹೇಳಲು ಅವಕಾಶವಿದೆ. ಆದರೆ ಈ ಸಂದರ್ಭದಲ್ಲಿ ಸತಿಪತಿಭಾವದ ಪರಿಕಲ್ಪನೆಗಿಂತ ಸ್ತ್ರೀ ಸ್ಥಾನಪಲ್ಲಟವಾದ ಚಾರಿತ್ರಿಕ ಸತ್ಯವನ್ನು ಗಮನದಲ್ಲಿಟ್ಟುಕೊಳ್ಳುವುದೇ ಒಳ್ಳೆಯದು. ಏಕೆಂದರೆ ಸಮೃದ್ಧಿಯ ಆಚರಣೆ ಮೂಲದಲ್ಲಿ ಹೆಣ್ಣಿಗೆ ಸಂಬಂಧಿಸಿದ, ಹೆಣ್ಣಿನ ಮೇಲ್ವಿಚಾರಣೆಯಲ್ಲಿ ನಡೆಯುತ್ತಿದ್ದ ಆಚರಣೆಯಾಗಿದೆ ಮತ್ತು ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಗೆ ಗಂಡಿಗೆ ಪ್ರಾಧಾನ್ಯ ನೀಡಿದ್ದರು ಹೆಣ್ಣು ದೇವತೆ ಗಂಡಿನ ಕೋರಿಕೆಯನ್ನು ಈಡೇರಿಸದಿರಬಹುದೆಂದು ಭೀತಿ ಇಲ್ಲಿ ನೆಲೆಗೊಂಡಿದೆ. ಹೆಣ್ಣು ಪ್ರಧಾನವಾಗಿದ್ದ ಸಾಂಸ್ಕೃತಿಕ ಘಟ್ಟವನ್ನು ಮರೆಯಲಾಗದೆ, ಸಾಂಕೇತಿಕವಾಗಿ ಅದನ್ನು ಅಭಿನಯಿಸುವ ಆಚರಣೆಯಾಗಿಯೂ ಗಂಡು ಪೂಜಾರಿಯ ಸ್ತ್ರೀ ವೇಶಧಾರಣೆಯನ್ನು ಗಮನಿಸಬಹುದಾಗಿದೆ. ಆದ್ದರಿಂದ ಗಂಡು ಹೆಣ್ಣಿನಂತೆ ವರ್ತಿಸಲು ಸಾಂಸ್ಕೃತಿಕ ಕಾರಣಗಳೇ ಮುಖ್ಯವಾದವು. ಬೆಂಗಳೂರು ಕರಗ ದೇವತೆಯ ಉತ್ಸವದ ಸಂದರ್ಭದಲ್ಲಿ ಅರ್ಚಕನಾದವನು ಸ್ತ್ರೀ ವೇಶಧಾರಿಯಾಗುತ್ತಾನೆ. ಮೂಲದಲ್ಲಿ ಕರಗದ ಉತ್ಸವವು ಸಮೃದ್ಧಿಯ ಆಚರಣೆಯಾಗಿರುವುದೇ ಇದಕ್ಕೆ

ಕಾರಣವಾಗಿದೆ. ಕರ್ನಾಟಕದ ಅನೇಕ ಹಳ್ಳಿಗಳಲ್ಲಿ ಪೂಜಾರಿಯು ಉತ್ಸವದ ಸಂದರ್ಭದಲ್ಲಿ ಸ್ತ್ರೀ ವೇಶಧಾರಿಯಾಗುವುದು ಸಾಮಾನ್ಯವಾದ ಪದ್ಧತಿಯಾಗಿದೆ. ಆತ ವಿವಾಹಿತನಾಗಿದ್ದರೆ ಉತ್ಸವದ ಅವಧಿಯಲ್ಲಿ ತನ್ನ ಪತ್ನಿಯೊಡನೆ ಲೈಂಗಿಕ ಸಂಬಂಧವನ್ನು ಇಟ್ಟುಕೊಳ್ಳಬಾರದೆಂಬ ನಿಯಮವೂ ಇದೆ.

ಮಾತೃ ದೇವತೆಗಳ ಆರಾಧನೆಯು ಚರಿತ್ರೆಯ ಪೂರ್ವ ಕಾಲದಲ್ಲಿ ಬಳಕೆಯಲ್ಲಿತ್ತೆಂಬುದಕ್ಕೆ ವಿಫುಲವಾದ ಸಾಕ್ಷ್ಯಾಧಾರಗಳು ದೊರೆಯುತ್ತವೆ. ಸಿಂಧೂ ಕಣಿವೆಯಲ್ಲಿ ದೊರೆತಿರುವ ಅನೇಕ ಸ್ತ್ರೀ ವಿಗ್ರಹಗಳು ಮಾತೃ ದೇವತಾ ಪಂಥಕ್ಕೆ ಸಂಬಂಧಿಸಿದವುಗಳು ಎಂಬುದಾಗಿದೆ. ಈ ಬಗೆಯ ಸ್ತ್ರೀ ವಿಗ್ರಹಗಳು ಪ್ರಪಂಚದ ನಾನಾ ಸಂಸ್ಕೃತಿಗಳಲ್ಲಿ ದೊರೆಯುತ್ತವೆ. ಆದಿಮಾನವನ ಮನಸ್ಸಿನಲ್ಲಿ ಹೆಣ್ಣು ಮತ್ತು ಪ್ರಾಣಿ ಈ ಎರಡು ಸಂಗತಿಗಳು ವಿಶೇಷವಾದ ಆಸಕ್ತಿಯನ್ನು ಕೆರಳಿಸಿದವು. ಲೈಂಗಿಕ ಸಂತೋಷದ ಮೂಲಧಾರವಾದ್ದರಿಂದ ಹೆಣ್ಣಿನ ಬಗ್ಗೆಯೂ ಆಹಾರ ಮೂಲವಾದ್ದರಿಂದ ಪ್ರಾಣಿಗಳ ಬಗ್ಗೆಯೂ ಆದಿಮಾನವನಲ್ಲಿ ಕುತೂಹಲ ಬೆಳೆದಿರಬೇಕು. ಮೊದಲ ಮಾನವರು ಆಹಾರ ಸಂಗ್ರಹಣೆಯಲ್ಲೂ, ಬೇಟೆಯಲ್ಲೂ ತೊಡಗಿದ್ದರು. ಆದ್ದರಿಂದ ಅವರ ಕಲೆಯಲ್ಲಿ ಹೆಣ್ಣು ಮತ್ತು ಪ್ರಾಣಿಗಳು ಸ್ಥಾನವನ್ನು ಪಡೆದವು. ಈ ಕಾರಣಕ್ಕಾಗಿಯೇ ಪ್ರಾರಂಭದ ಕಲಾ ಚಿತ್ರಗಳಲ್ಲಿ ನಾವು ಬೇಟೆಯ ದೃಶ್ಯಗಳನ್ನು, ಹೆಣ್ಣಿ ಚಿತ್ರಗಳನ್ನು ಕಾಣುತ್ತೇವೆ. ಹೆಣ್ಣನ್ನು ಚಿತ್ರಿಸುವಾಗ ಆಕೆಯ ಸ್ತನಗಳನ್ನೂ, ಜಘನಗಳನ್ನೂ ಪ್ರಧಾನವಾಗಿ ಚಿತ್ರಿಸಲಾಗಿದೆ. ಹೀಗೆ ಸ್ತ್ರೀಯರು ಆರಂಭದ ಕೃಷಿಕಾರರಾದರೆ ಪುರುಷರು ಆರಂಭದ ಕಲಾಕಾರರಾಗಿದ್ದಾರೆ. ಆದ್ದರಿಂದ ಈ ಹಂತದಲ್ಲಿ ಧಾರ್ಮಿಕವಾದ ಭಾವನೆಗಳು ಸ್ತ್ರೀಯ ಸುತ್ತ ಹೆಣೆದುಕೊಂಡಿರುವುದನ್ನು ಕಾಣುತ್ತೇವೆ.

**ಗ್ರಾಮದೇವತೆಗಳ ಪ್ರಾಚೀನತೆ** :

ಗ್ರಾಮ ದೇವತೆಗಳ ಕಲ್ಪನೆಯು ತುಂಬಾ ಪ್ರಾಚೀನವಾದದ್ದು. ವೇದ–ಉಪನಿಷತ್ತು ಮತ್ತು ಪುರಾಣಕ್ಕಿಂತಲೂ ಹಿಂದಿನದೆಂದು ಹೇಳಬಹುದು. ಹರಪ್ಪಾ, ಮೊಹೆಂಜೊದಾರೋ ಸಂಸ್ಕೃತಿಯಲ್ಲಿ ಕ್ರಿ.ಪೂ.4 ರಿಂದ 2ನೇ ಶತಮಾನದ ನಾಗರಿಕತೆಯಲ್ಲಿ ದೇವತಾ ವಿಗ್ರಹಗಳು ದೊರಕಿದ ಬಗೆಗೆ ಉಲ್ಲೇಖಗಳನ್ನು ಕಾಣಬಹುದು. ಮಾನವನು ಗ್ರಾಮ ಜೀವನವನ್ನು ಪ್ರಾರಂಭ ಮಾಡಿದ ಮೇಲೆ ಗ್ರಾಮ ದೇವತೆಯ ಸೃಷ್ಟಿಯಾಯಿತು. ಆದರೆ ಮಾನವ ಎಂದಿನಿಂದ ಗ್ರಾಮದಲ್ಲಿ ನೆಲೆಯೂರಿ ನಿಂತ? ಯಾವ ಕಾಲದಲ್ಲಿ ಗ್ರಾಮ ದೇವತೆಗಳು ಸೃಷ್ಟಿಗೊಂಡು ಬಂದವು ಎಂದು ಸ್ಪಷ್ಟವಾಗಿ ಹೇಳಲು ಆಧಾರ ಸಾಮಗ್ರಿಗಳ ಕೊರೆತೆ ತುಂಬಾ ಇದೆ.

ಮುಖ್ಯವಾಗಿ ಗ್ರಾಮ ದೇವತೆಗಳ ಪ್ರಾಚೀನತೆ ಕುರಿತಂತೆ ಪ್ರೊ. ಎಚ್.ವಿ. ನಾಗೇಶ್ ಅವರು "ಗ್ರಾಮಗಳು ನೆಲೆಗೊಂಡ ದಿನದಂದಿನಿಂದ ಅಂದರೆ ವೇದಪೂರ್ವ ಕಾಲದಿಂದಲೂ ಗ್ರಾಮ ದೇವತೆಯ ಸಂಪ್ರದಾಯ ಇದ್ದಿರಬಹುದೆಂದು" ಅಭಿಪ್ರಾಯಪಡುವರು. ಆದರೆ ಅಲ್ತೆಕರ್‌ರವರು ಮೂರ್ತಿ ಪೂಜೆಯ

ಆರಂಭ ಮತ್ತು ಬೆಳವಣಿಗೆ ವಿಷಯವಾಗಿ ಇನ್ನೂ ಕೆಲಸ ಆಗಬೇಕಾಗಿದೆ. ಮನೆಯಲ್ಲೇ ಆಗಲಿ ದೇವತಾ ಮೂರ್ತಿಯನ್ನು ಪೂಜಿಸುವ ವಿಷಯವನ್ನು ಧರ್ಮ ಸೂತ್ರಕಾರರೂ ಸಾಮಾನ್ಯವಾಗಿ ಹೇಳುವುದಿಲ್ಲ. ಮನು ಕೂಡ ಹೇಳಿಲ್ಲ. ದೇವಸ್ಥಾನವನ್ನು ಪೂಜಿಸುವ ಸಂಪ್ರದಾಯ ಅಶೋಕನಿಗಿಂತ ಇತ್ತೀಚಿನದೆಂದು ಕಾಣುತ್ತದೆ ಎಂಬ ಅಭಿಪ್ರಾಯವು ಇದೆ.

ದೇವಸ್ಥಾನಗಳು ಸಾರ್ವಜನಿಕ ಪೂಜಾ ಕೇಂದ್ರಗಳೆಂದು ಮುಂದೆ ಪರಿಗಣಿತವಾದವು. ಇಂದಿಗು ಕೆಲವೊಂದು ಅಂಶಗಳು ಹಳ್ಳಿ-ಪಟ್ಟಣಗಳಲ್ಲಿ ಉಳಿದುಕೊಂಡು ಬಂದಿವೆ. ದೇವರಿಗೆ ವೀಳ್ಯವನ್ನು ಸ್ವೀಕರಿಸುವ ಸಂಪ್ರದಾಯವನ್ನು ಪ್ರಾರಂಭ ಮಾಡಿದವರು ಆರ್ಯರು. ಇವರು ಇದನ್ನು ದ್ರಾವಿಡರಿಂದ ಸ್ವೀಕಾರ ಮಾಡಿದರು. ಈ ವೀಳ್ಯೆಯನ್ನು ಸ್ವೀಕರಿಸುವ ಸಂಪ್ರದಾಯವನ್ನು ಅವಲೋಕಿಸಿದರೆ ಗ್ರಾಮ ದೇವತೆಯ ಮೂಲ ಪ್ರಾಚೀನಕ್ಕೆ ಹೋಗುತ್ತದೆ. ಪೂರ್ವ ಚೀನ ಕಾಲದಿಂದ ಪ್ರಾಚೀನ ಕಾಲದವರೆಗೂ ಗ್ರಾಮ ದೇವತೆಗಳು ಹಳ್ಳಿಯ ಜನರ ಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತುಕೊಂಡಿದ್ದವು ಎಂದು ಹೇಳಬಹುದು. ಇವತ್ತಿಗೂ ಪ್ರತಿಯೊಂದು ಹಳ್ಳಿ-ಹಳ್ಳಿಗಳಲ್ಲೂ ದೇವಾಲಯಗಳು ಸ್ಥಾಪನೆಗೊಂಡಿದುದರ ಬಗೆಗೆ ಅನೇಕ ಐತಿಹ್ಯಗಳು ಕೈಗೆ ಸಿಗುತ್ತವೆ. ಹೀಗೆ ಇನ್ನೂ ಅನೇಕ ಅಂಶಗಳನ್ನು ಊಹಿಸಲೂ ಅವಕಾಶವಿದೆ.

ಅದೇ ರೀತಿ ಜಿ.ಆರ್.ತಿಪ್ಪೇಸ್ವಾಮಿ ಅವರು ಗ್ರಾಮ ದೇವತೆಗಳ ಆರಾಧನೆಯು ಆರ್ಯ ಪೂರ್ವ ಕಾಲದಿಂದಲೂ ನಡೆಯುತ್ತಾ ಬಂದಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಹಾಗೆಯೇ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಗ್ರಾಮ ದೇವತೆಯ ಕಲ್ಪನೆ ಅತ್ಯಂತ ಪ್ರಾಚೀನವಾದುದು. ಆರ್ಯರ ಉಪನಿಷತ್ತು ವೇದಗಳ ಕಾಲಕ್ಕೆ ಸೇರಿದವು ಎಂದು ಹೇಳಲಾಗುತ್ತದೆ. ರಾಮಾಯಣದ ಕಾಲಕ್ಕಿಂತಲೂ ಹಿಂದಿನಿಂದಲೂ ದೇವತೆ ಇದ್ದಿರಬೇಕು ಎಂದಿದ್ದಾರೆ. ಹೀಗಾಗಿ ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದರೆ ಗ್ರಾಮ ದೇವತೆಗಳ ಪ್ರಾಚೀನತೆಯ ಬಗೆಗೆ ವಿದ್ವಾಂಸರಲ್ಲಿಯೂ ಖಚಿತವಾದ ಅಭಿಪ್ರಾಯಗಳಿಲ್ಲವೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದರೆ ಗ್ರಾಮ ದೇವತೆಗಳ ಬಗೆಗೆ ಊಹಿಸಲು ಸಾಕಷ್ಟು ಆಧಾರಗಳು ಸಿಗುತ್ತವೆ. ಆದರೆ ಲಭ್ಯವಾದ ಆಧಾರಗಳ ಮೂಲಕ ವಿವೇಚಿಸಿದರೆ ಖಚಿತವಾದ ಅಭಿಪ್ರಾಯ ಮೂಡಿಬರುವುದಿಲ್ಲ.

**ಹರಿಯಲಮ್ಮನ ದೇವಾಲಯ** :

ದೂರದ ಊರಿಂದ ಬಹಳ ವರ್ಷಗಳ ಹಿಂದೆ ವ್ಯಾಪಾರಕ್ಕಾಗಿ ಊರಿಂದ ಊರಿಗೆ ಅಕ್ಕಿ, ರಾಗಿ, ದವಸ, ಧಾನ್ಯಗಳ ವ್ಯಾಪರ ಮಾಡಲು ಬರುತ್ತಾರೆ. ಹರಿಹರದ ಬಳಿ ತುಂಗಾಭದ್ರ ನದಿಯ ಸೇತುವೆ ದಾಟಿ ಎತ್ತಿನ ಗಾಡಿ ಬರುವಾಗ ಗಾಡಿಯಲ್ಲಿದ್ದ ಮೂಟೆಗಳು ಜಾರಿಕೊಳ್ಳುತ್ತಿದ್ದವಂತೆ ತಕ್ಷಣ ಗಾಡಿಯಿಂದ ಇಳಿದು ಮೂಟೆಗಳು ಜಾರದಂತೆ ಅದಕ್ಕೊಂದು ಭದ್ರವಾದ ಕಲ್ಲನ್ನು ಒತ್ತು ಕೊಟ್ಟು ಅಲ್ಲಿಂದ ಹೊರಟು ವ್ಯಾಪಾರಿಗಳು

ಆಯಾಸದಿಂದ ಪ್ರಯಾಣ ಮಾಡಿ ಬಳಲಿ ಬೆಂಡಾಗಿದ್ದ ವ್ಯಾಪಾರಸ್ಥರು ಸಂಜೆ 7ರ ಸಮಯದಲ್ಲಿ ಬಯಲಿನಲ್ಲಿ ಗಾಡಿಯನ್ನು ಬೀಡು–ಬಿಟ್ಟರಂತೆ ರಾತ್ರಿ ಎತ್ತುಗಳನ್ನು ಬಿಗಿಯಾಗಿ ಮರದ ಗೂಟಗಳಿಗೆ ಕಟ್ಟಿಹಾಕಿ ಭೋಜನ ಮುಗಿಸಿ ಮಲಗಿದರಂತೆ ಬೆಳಗ್ಗೆ ಎದ್ದು ಎತ್ತುಗಳನ್ನು ಎಳಸಿದರೆ ಅವು ಮೂರ್ಛೆ ಹೋದಂತೆ ಮಲಗಿದ್ದವಂತೆ. ಇದರಿಂದ ಗಾಬರಿಗೊಂಡ ವ್ಯಾಪಾರಿಗಳು ಸಮೀಪದ ಮಾರನಹಳ್ಳಿಗೆ ಹೋಗಿ ಅಲ್ಲಿ ಜ್ಯೋತಿಷ್ಯರನ್ನು ಕೇಳದರಂತೆ. ಆಗ ಜ್ಯೋತಿಷ್ಯನು ಈ ರೀತಿ ಹೇಳದನಂತೆ. ನಿಮ್ಮ ಎತ್ತುಗಳ ಜೊತೆಯಲ್ಲಿ ಹರಿಹರದಿಂದ ಹರಿಯಲ್ಲಮ್ಮನು ಇಲ್ಲಿಗೆ ಬಂದಿದ್ದಾಳೆ. ನೀವು ನೆಲೆ ನಿಂತಿರುವ ಜಾಗದಲ್ಲಿ ನೆಲೆಸುವ ಉದ್ದೇಶದಿಂದ ಈ ರೀತಿ ಮಾಡಿದ್ದಾಳೆ. ಎತ್ತುಗಳು ಮಲಗಿರುವ ಜಾಗದಲ್ಲಿ ಅಮ್ಮನಿಗೆ ಆಶ್ರಯ ಮಾಡಿಕೊಡಿ ಎಂದರಂತೆ. ವ್ಯಾಪಾರಸ್ಥರು ಅದಕ್ಕೆ ಸಾಕ್ಷಿ ಏನೆಂದು ಕೇಳದಾಗ ಜ್ಯೋತಿಷ್ಯರು ಹೇಳದರಂತೆ. ಇಲ್ಲಿಂದ ನೀವು ಹೋಗುವಷ್ಟೊತ್ತಿಗೆ ಗೂಟಗಳು ಚಿಗುರಿ ಸಸಿಗಳಾಗುತ್ತವೆ ಎಂದು ಹೇಳದಾಗ ವ್ಯಾಪಾರಸ್ಥರು ಅಲ್ಲಿಗೆ ಹೋಗುವ ವೇಳೆಗಾಗಲೆ ಅವರು ಹೇಳದ್ದು ನಿಜವಾಗಿತ್ತಂತೆ. ಆಗ ವ್ಯಾಪಾರಿಗಳು ಸತ್ಯವೆಂದು ನಂಬಿ ಬೇವಿನ ಮರದಡಿಯಲ್ಲಿ ಒಂದು ಪುಟ್ಟ ಗುಡಿಯನ್ನು ಕಟ್ಟಿ ಮುಂದೆ ವ್ಯಾಪಾರಕ್ಕೆ ಹೊರಟರಂತೆ ಎಂದು ಸಾಕ್ಷಿಯಾಗಿದೆ

ಹರಿಯಲ್ಲದಮ್ಮನ ದೇವಾಲಯ ಈ ದೇವಾಲಯದಲ್ಲಿ ವ್ಯಾಪಾರಕ್ಕೆಂದು ಬರುವ ಇವರು (ಜನ) ಹರಿಯಲ್ಲದಮ್ಮ ಗ್ರಾಮ ದೇವತೆಯಾದ ತಮ್ಮ ಇಷ್ಟ ಸಿದ್ಧಿಗಾಗಿ ಅವಳ ಹತ್ತಿರ ಬೇಡಿಕೊಳ್ಳುತ್ತಾರೆ. ಮುಂದೆ ಇಚ್ಚೆಗನುಸಾರವಾಗಿ ನಡೆದಾಗ ತಮ್ಮ ಕೈಯಲ್ಲಿದ್ದ ಹರಕೆಗಳನ್ನು ತೀರಿಸುತ್ತಾರೆ. ಮತ್ತು ಹರಕೆ ಸಂದರ್ಭದಲ್ಲಿ ಜಾನಪದ ಶೈಲಿಯ ಸಾಂಸ್ಕೃತಿಕ ಕಾರ್ಯಕ್ರಮಗಳು, ಪೂಜೆ ಪುರಸ್ಕಾರಗಳು ಮುಂತಾದವುಗಳನ್ನು ಹರಿಯಾಲ್ಲದಮ್ಮನ ದೇವಸ್ಥಾನದಲ್ಲಿ ನಡೆಸಿಕೊಳ್ಳುತ್ತಾರೆ. ಹೀಗೆ ಗ್ರಾಮ ದೇವತೆಯಾದ ಅಮ್ಮ ಹರಿಯದಮ್ಮನ ಸ್ಮರಣೆಮಾಡಿ ಅವಳಿಗೆ ಜಾನಪದ ಶೈಲಿಯಲ್ಲಿ ನರಬಲಿ ರೀತಿಯಲ್ಲಿ ಅಮ್ಮನಿಗೆ ಗೌರವವನ್ನು ಸಮರ್ಪಣೆ ಮಾಡುತ್ತಾರೆ. ಸೇವೆಗಳು ಮತ್ತು ಹರಕೆಗಳು ತಮ್ಮ ಇಷ್ಟ ಸಿದ್ಧಿಯನ್ನು ನಡೆಸಿಕೊಟ್ಟಿದ್ದಾಗ ಆ ಗ್ರಾಮ ದೇವತೆಯ ಬಗ್ಗೆ ಜನರಿಗೆ ಮತ್ತು ಸುತ್ತಮುತ್ತಲಿನ ಜನರಿಗೆ ಗ್ರಾಮಗಳ ಜನರಿಗೆ ಹಲವಾರು ಪ್ರದೇಶಗಳಿಂದ ಸ್ಮರಣೆಯ ಭಾವನೆಗಳನ್ನು ಅಮ್ಮ ಇರುವ ಸ್ಥಳಕ್ಕೆ ಬಂದು ತಮ್ಮ ಭಕ್ತಿ ಪೂರ್ವಕವಾಗಿ ಬೇಡಿಕೊಳ್ಳುತ್ತಾರೆ.

**ಚಂದಗೋನಹಳ್ಳಿ ಅಮ್ಮ ದೇವಾಲಯ** :

ಈ ದೇವಿಯ ಸನ್ನಿಧಿಯು ಗದ್ದೆಯಿಂದ ಸುತ್ತುವರೆದಿದೆ. ಇಲ್ಲಿ ಕಲ್ಲಿನ ಎರಡು ಹೆಣ್ಣು ವಿಗ್ರಹಗಳು ಕಂಡುಬರುತ್ತವೆ. ಮೊದಲನೆಯದನ್ನು ಚಿಕ್ಕಮ್ಮನೆಂದು ಎರಡನೆಯದನ್ನು ದೊಡ್ಡಮ್ಮನೆಂದು ಕರೆಯುತ್ತಾರೆ. ದೊಡ್ಡಮ್ಮನ ವಿಗ್ರಹ ಅಲ್ಲೆ ಉದ್ಭವವಾದಂತೆ ಚಿಕ್ಕಮ್ಮನ ವಿಗ್ರಹವನ್ನು ಯಾರೋ ಮಕ್ಕಳಿಲ್ಲದವರು ಕೆತ್ತಿಸಿ ಅಲ್ಲಿ

ತಂದು ಇಟ್ಟಿದ್ದು ಎಂದು ಹೇಳುತ್ತಾರೆ. ಈ ದೇವಿಗೆ ಮೊದಲು ಯಾವುದೇ ರೀತಿಯ ಗುಡಿಗೋಪುರಗಳು ಇರಲಿಲ್ಲ. ಇತ್ತೀಚೆಗೆ ಯಾರೋ ಭಕ್ತರು ಒಂದು ಗುಡಿಯನ್ನು ನಿರ್ಮಿಸಿಕೊಟ್ಟಿದ್ದಾರೆ. ಇಲ್ಲಿ ವಿಶೇಷವೆಂದರೆ ಇಲ್ಲಿ ಪೂಜಾರಿಗಳ ಕಾಟವಿಲ್ಲ ಬಂದ ಭಕ್ತಾದಿಗಳೇ ಪೂಜೆ ವಿಧಿಗಳನ್ನು ಮಾಡಿಕೊಳ್ಳುತ್ತಾರೆ.

ಈ ಗ್ರಾಮ ದೇವತೆಗೆ ಮಂಗಳವಾರ ಮತ್ತು ಶುಕ್ರವಾರಗಳು ಇಷ್ಟವಾದ ವಾರಗಳಾಗಿದ್ದು ಅಂದು ಹೆಚ್ಚು ಜನರು ಸೇರುತ್ತಾರೆ. ಇತ್ತೀಚೆಗೆ ಇವುಗಳ ಜೊತೆಗೆ ರಜೆ ದಿನವಾದ್ದರಿಂದ ಭಾನುವಾರವೂ ಸಹ ಸೇರಿಕೊಂಡಿದೆ. ಉಳಿದಂತೆ ಅಮಾವಾಸ್ಯೆ ಹುಣ್ಣಿಮೆಗಳಲ್ಲಿ ಜಾತ್ರೆಯೇ ನಿರ್ಮಾಣವಾದಂತೆ ಇಲ್ಲಿ ಜನ ಸೇರುತ್ತಾರೆ. ಇದು ಈ ಭಾಗದಲ್ಲಿ ಹೆಚ್ಚು ಪ್ರಸಿದ್ಧಿಪಡೆದು ಇಲ್ಲಿನ ಸ್ಥಳೀಯರಷ್ಟೇ ಅಲ್ಲದೇ ಬೇರೆ ಬೇರೆ ಕಡೆಗಳಿಂದಲೂ ಈ ದೇವಿಯ ಸನ್ನಿಧಿಗೆ ಬರುತ್ತಾರೆ. ಈ ಚಂದಗೋನಹಳ್ಳಿ ಅಮ್ಮನ ಬಳಿ ಹರಕೆ ಮಾಡಿಕೊಂಡರೆ ಶೀಘ್ರದಲ್ಲಿಯೇ ಅದು ಈಡೇರುತ್ತದೆ ಎಂಬ ನಂಬಿಕೆ ಇದೆ. ಈ ಹಿನ್ನೆಲೆಯಲ್ಲಿ ಹಲವಾರು ಜನರು ಹರಕೆ ಮಾಡಿಕೊಳ್ಳಲು ಹರಕೆ ಮಾಡಿಕೊಂಡಿದ್ದನ್ನು ತೀರಿಸಲು ದೇವಿಯ ಸನ್ನಿಧಿಗೆ ಭಕ್ತಾದಿಗಳು ಬರುತ್ತಾರೆ.

ಈ ದೇವಿಯು ಮಾಂಸಹಾರಿಯಾಗಿದ್ದು ಕೋಳಿ, ಕುರಿ, ಹಂದಿಗಳನ್ನು ಬಲಿಕೊಟ್ಟು ತಮ್ಮ ಹರಕೆಗಳನ್ನು ದೇವರಿಗೆ ತೀರಿಸುತ್ತೇವೆ. ಮತ್ತು ಕೆಲವರು ಪರ ಮಾಡುವ ಸಂಪ್ರದಾಯ ಇಲ್ಲಿ ಕಂಡುಬರುತ್ತದೆ. ಗ್ರಹಚಾರ ಸರಿಯಲ್ಲ ಎಂದುಕೊಳ್ಳುವರು ಮಾಟ ಮಂತ್ರದ ಭಯವಿರುವವರು ಇಲ್ಲಿ ತಡೆ ಹೊಡೆಸುತ್ತಾರೆ. ಇಲ್ಲಿ ಕೆಲವರು ತಡೆ ಹೊಡೆಯುವ ಕಾಯಕ ಮಾಡುವವರು ಕಂಡುಬರುತ್ತಾರೆ. ಚಿಕ್ಕ ಮಣ್ಣಿನ ಕುಡುಕೆಯ ಮೇಲೆ ತಂಗಿನ ಕಾಯಿ, ಬಳೆ, ಬಿಚ್ಚೋಲೆ ನಿಂಬೆಹಣ್ಣು ಇಟ್ಟು ಹೊಡೆಯುವುದಕ್ಕೆ ತಡೆ ಹೊಡೆಯುವುದು ಎನ್ನುತ್ತಾರೆ. ಹೀಗೆ ಮೇಲೆ ತಿಳಿಸಿದ ವಿಶೇಷ ಸಂದರ್ಭ ದಿನಗಳಲ್ಲಿ ಇಲ್ಲಿ ಚಿಕ್ಕ ಜಾತ್ರೆಯೇ ನಿರ್ಮಾಣವಾದಂತೆ ಕಂಡುಬರುತ್ತದೆ.

ಚಂದಗೋನಹಳ್ಳಿ ಅಮ್ಮನ ದೇವಾಲಯದಲ್ಲಿ ಪೂಜೆ, ಹರಕೆ, ಹಾಗೂ ಸಂಪ್ರದಾಯಗಳನ್ನು ಅಮ್ಮನ ವರವಾಗಿರುವ ಮಂಗಳವಾರ ಹಾಗೂ ಶುಕ್ರವಾರ ಮತ್ತು ಭಾನುವಾರದಂದು ಹಲವು ಜಾನಪದ ಶೈಲಿಯ ಪಾರಂಪರಿಕ ಭಾಷೆ ಹಾಗೂ ಆಚರಣೆಗಳನ್ನು ಮಾಡುವ ಮೂಲಕ ಅಮ್ಮನಿಗೆ ಗೌರವವನ್ನು ಸಲ್ಲಿಸುತ್ತಾರೆ. ಕುರಿ, ಕೋಳಿ, ಹಂದಿ, ಮೇಕೆ ಹೀಗೆ ರಕ್ತ ಬಲಿಕೊಟ್ಟು ಅಮ್ಮನಿಗೆ ಗೌರವ ಸಲ್ಲಿಸುವವರು ಮತ್ತು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಹಾಗೂ ಭಾನುವಾರ ಹೀಗೆ ಸೇರಿದಂತೆ ಪ್ರತಿ ಅಮಾವಾಸ್ಯೆ ಮತ್ತು ಹುಣ್ಣಿಮೆಯಲ್ಲಿ ಗ್ರಾಮ ದೇವತೆಯಾದ ಅಮ್ಮನ ಹೆಸರಿನಲ್ಲಿ ತೆಂಗಿನಕಾಯಿ, ಬಳೆ, ಬಿಚ್ಚೋಲೆ, ನಿಂಬೆಹಣ್ಣು, ಅರಿಸಿನ–ಕುಂಕುಮ ಇಟ್ಟು ತಡೆ ಹೊಡೆಯುವುದು ಪಾರಂಪರಿಕವಾಗಿ ಜಾನಪದೀಯ ಸಂಸ್ಕೃತಿಯಾಗಿದೆ.

**ಗವಿರಂಗನಾಥ ಸ್ವಾಮಿ ದೇವಾಲಯ** :

ಗವಿರಂಗಸ್ವಾಮಿಯ ಗುಡ್ಡದ ಬಗ್ಗೆ ಐತಿಹ್ಯದ ರೂಪಾಂತರವು ಇದೆ. ಜೊತೆಗೆ ಈ ಗುಡ್ಡದ ಸುತ್ತ ಹಳ್ಳಿಗಳಂದ ದನ, ಎಮ್ಮೆ, ಕುರಿ, ಹೊಡೆದುಕೊಂಡು ಗುಡ್ಡದ ಬಳ ಮೇಯಿಸಲು ಹಳ್ಳಿಗರು ಬರುತ್ತಿದ್ದರು. ಗುಡ್ಡದ ಬಳ ರಾಸುಗಳನ್ನು ಮೇಯಿಸಲು ಬರುತ್ತಿದ್ದವರಲ್ಲಿ ಕುರಿ ಕಾಯುವ ಗವಿಯ ಮತ್ತು ದನ ಕಾಯುವ ರಂಗ ಎಂಬ ಇಬ್ಬರು ಹುಡುಗರಿದ್ದರೂ, ಇವರಿಬ್ಬರೂ ಕುತೂಹಲದಿಂದ ಒಂದು ದಿನ ಗುಹೆಯ ಬಾಯಿ ಬಳ ಹೋದರೂ ಗವಿಯ ವೀರನೆಂಬ ಖ್ಯಾತಿಯನ್ನು ಪಡೆದಿದ್ದ ಈತನಿಗೆ ಗುಹೆಯ ಒಳಗೆ ಏನಿರಬಹುದೆಂಬ ಕುತೂಹಲ ಅರಳ ಗುಹೆಯ ಬಾಯಿಯ ಒಳಕೆ ಹೋದ, ಹೋದವನು ಎಷ್ಟು ಹೊತ್ತಾದರೂ ಒಳಗಿನಿಂದ ಹೊರಕ್ಕೆ ಬರಲಿಲ್ಲ ರಂಗಗವಿಯನಿಗಾಗಿ ಕೂಗಿದರೂ ಗವಿಯ ಓ ಗೂಡಲಿಲ್ಲ. ಕಾದು ಕಾದು ಮತ್ತಷ್ಟು ಕಂಗಾಲಾದ ಹೊತ್ತು ಬೀಳುವಷ್ಟರಲ್ಲಿ ರಂಗನು ಗವಿಯನ ಮನೆಗೆ ಸುದ್ದಿ ಹೇಳದ. ಗವಿಯನ ತಂದೆ, ತಾಯಿ ಕೂಗಿದರೂ ಗವಿಯ ಉತ್ತರಿಸಲಿಲ್ಲ. ಗವಿಯ ಗವಿಯಲ್ಲಿಯೇ ಕಣ್ಮರೆಯಾದನು. ಒಂದು ದಿನ ಗವಿಯ ತನ್ನ ತಾಯಿಯ ಕನಸಿನಲ್ಲಿ ಅವ್ವಾ ನಂಗೆ ಹಿಟ್ಟು ಸೊಪ್ಪಿನ ಸಾರು ತಂದು ಕೂಡವ್ವ ಎಂದರಂತೆ ಹೆತ್ತ ಕರಳು ಈ ಮಾತಿಗೆ ಮರುಕಗೊಂಡು ತನ್ನ ಯಜಮಾನ ಮತ್ತು ಮನೆಯವರೊಡನೆ ಗುಹೆ ಬಳ ಬಂದು ಗುಹೆಯ ಬಾಯಿಗೆ ಹಿಟ್ಟು ಸೊಪ್ಪಿನ ಸಾರನ್ನು ಎಡೆಯಿಟ್ಟು ಪೂಜಿಸಿ ನಮಸ್ಕರಿಸಿ ಹೋದರಂತೆ, ಅಂದಿನಿಂದ ಆ ಗುಡ್ಡದ ಗುಹೆಯನ್ನು ಗವಿರಂಗನಾಥ ಎಂದು ಕರೆದು ಜನಪದರು. ಭಕ್ತಿಯಿಂದ ಎಡೆಯಿಟ್ಟು ಪೂಜಿಸತೊಡಗಿದರು. ಆ ಗುಹೆಗೆ ಗವಿಯ ಮತ್ತು ರಂಗ ಒಡೆಯರಾದರೆಂಬ ಅರ್ಥದಲ್ಲಿ ಗವಿರಂಗನಾಥನ ಗುಡ್ಡ ಎಂದು ಹೆಸರು ಬಂದಿದೆ. ಭಕ್ತರು ಪ್ರತಿದಿನ ಬಂದು ಗವಿರಂಗಸ್ವಾಮಿಯನ್ನು ಪೂಜಿಸುತ್ತಾರೆ. ತಮ್ಮ ದನಕರುಗಳ ಕ್ಷೇಮಕ್ಕಾಗಿ ಹರಕೆ ಹೊತ್ತವರೇ ಹೆಚ್ಚಾಗಿ ಇಲ್ಲಿಗೆ ಬರುತ್ತಾರೆ. ಪ್ರಪ್ರಥಮವಾಗಿ ಹಸು, ಎಮ್ಮೆ, ಕರುವನ್ನು ಹಾಕಿದಾಗ ಗಿಣ್ಣಿನ ಬುತ್ತಿ ತಂದು ಗವಿರಂಗನಾಥ ಗುಡ್ಡಕ್ಕೆ ಎಡೆಯನ್ನು ನೀಡುತ್ತಾರೆ. ಹರಕೆ ಹೊತ್ತವರು ಇಲ್ಲಿಗೆ ಬಂದು ಕುರಿ–ಕೋಳಿಯನ್ನು ಬಲಿಕೊಟ್ಟು ಮಾಂಸದ ಅಡಿಗೆ ಮಾಡಿ ಹರಕೆ ಹೊತ್ತವರು ಹರಕೆ ಸಲ್ಲಿಸಿ ಹೋಗುತ್ತಾರೆ. ಗವಿರಂಗನಾಥಸ್ವಾಮಿ ದೇವಾಲಯದಲ್ಲಿ ದನಕರುಗಳ ಕ್ಷೇಮಕ್ಕಾಗಿ ದೇವರಲ್ಲಿ ಹರಕೆ ಹೊತ್ತಿ ಆ ಹರಕೆಯು ಈಡೇರಿದಾಗ ಎಮ್ಮೆ, ಹಸು, ಕರು ಹಾಕಿದಾಗ ಗಿಣ್ಣಿನ ಬುತ್ತಿಯನ್ನು ಗವಿರಂಗನಾಥಸ್ವಾಮಿ ದೇವಾಲಯಕ್ಕೆ ಹರಕೆ ಒಪ್ಪಿಸುತ್ತಾರೆ. ಆ ಹರಕೆಯ ಭಾಷೆಯು ಹಾಗೂ ಆಚರಣೆಗಳು ಜಾನಪದ ಶೈಲಿಯಲ್ಲಿದ್ದು ಇವುಗಳ ಮೂಲಕ ಗ್ರಾಮೀಣ ಪರಂಪರೆಯ ಜಾನಪದ ಶೈಲಿಯನ್ನು ಈ ದೇವಾಲಯಗಳ ಮೂಲಕ ಆಚರಿಸಲಾಗುತ್ತದೆ.

**ಉಪಸಂಹಾರ** :ಆಧುನಿಕತೆ ಹಾಗೂ ತಂತ್ರಜ್ಞಾನ ಬೆಳೆದಂತೆ ಹೋದರೂ ಸಹ ಗ್ರಾಮೀಣ ಪ್ರದೇಶದಲ್ಲಿ ಗ್ರಾಮ ದೇವತೆಗಳ ಒಲವು ಕಡಿಮೆಯಾಗಿಲ್ಲ. ಇದಕ್ಕೆ ಕಾರಣ ಗ್ರಾಮೀಣ ಪ್ರದೇಶದ ಜನ ಸಮುದಾಯ ಗ್ರಾಮ

ದೇವತೆಗಳೊಂದಿಗೆ ಹೊಂದಿರುವ ಭಾವನಾತ್ಮಕ ಹಾಗೂ ಮಾನಸಿಕ ಸಂಬಂಧವು ಗ್ರಾಮ ದೇವತೆಗಳ ಬಗ್ಗೆ ಗಟ್ಟಿಯಾದ ನಂಬಿಕೆ ಆಚರಣೆಗಳನ್ನ ಮಾಡಲು ಪೂರಕವಾಗಿದೆ.

ಇತ್ತೀಚಿನ ಕೆಲವು ಅಧ್ಯಯನಗಳ ಪ್ರಕಾರ ಹಾಗೂ ವೈಜ್ಞಾನಿಕ ಹಾಗೂ ಸಂಶೋಧಕರು ಹಾಗೂ ಸರ್ಕಾರ ಗ್ರಾಮೀಣ ಸಮುದಾಯದ ಜನ ಸಮುದಾಯಕ್ಕೆ ಭಾನುಮತಿ, ನರಬಲಿ, ಪ್ರಾಣಿಬಲಿ, ಬೆತ್ತಲೆ ಸೇವೆ ಮುಂತಾದವುಗಳನ್ನು ಗ್ರಾಮ ದೇವತೆಗಳ ಹೆಸರಿನಲ್ಲಿ ಸೇವೆ ಸಲ್ಲಿಸುವುದು ನಿಲ್ಲಿಸಿದ್ದರೂ ಕೂಡ ಗ್ರಾಮೀಣ ಪ್ರದೇಶದ ಜನ ಸಮುದಾಯ ಅವುಗಳನ್ನು ನಿಲ್ಲಿಸುತ್ತಿಲ್ಲ. ಪ್ರಗತಿಪರ ಚಿಂತಕರು ಇದರ ಬಗ್ಗೆ ಹಲವು ಸಾಮಾಜಿಕ ಅರಿವು ಕಾರ್ಯಕ್ರಮ ಹಮ್ಮಿಕೊಂಡಿದ್ದರೂ ಸಹ ಅವುಗಳನ್ನು ತಡೆಯಲು ಆಗುತ್ತಿಲ್ಲ. ಇದನ್ನು ಗಮನಿಸಿದಾಗ ಗ್ರಾಮ ದೇವತೆಗಳ ಬಗ್ಗೆ ಅವರ ನಿಲುವು ನಮಗೆ ಸ್ಪಷ್ಟವಾಗುತ್ತದೆ. ಗ್ರಾಮ ದೇವತೆಗಳ ಜಾನಪದೀಯ ಪಾರಂಪರಿಕ ಆಚರಣೆಗಳು ನಮಗೆ ಆ ಸಮುದಾಯದ ಸಾಂಸ್ಕೃತಿಕ ಪರಂಪರೆಯ ಆಚರಣೆಗಳು, ಸೇವೆಗಳು, ಜಾನಪದ ಶೈಲಿಯಲ್ಲಿ ದೇವತೆಗಳ ಮುಂದೆ ಪ್ರಚುರಪಡಿಸಿದಾಗ ಅದನ್ನು ಕೇಳುವುದರಲ್ಲಿ ನೋಡಿದವರಲ್ಲಿ ಭಯ, ಭಕ್ತಿ ಮೂಡುತ್ತದೆ. ಜೊತೆಗೆ ನಾವು ದೋಷ ದಾರಿಗಳನ್ನು ಹಿಡಿಯಬಾರದು ಕೆಳ ಸಮುದಾಯ ಶೋಷಿತ ವರ್ಗ ಬಡ ಜನರ ನಿರ್ಗತಿಕರ ಶೋಷಣೆ ಮಾಡಬಾರದು ಎಂದು ತಿಳಿಸುತ್ತದೆ. ಜೊತೆಗೆ ಒಂದು ವೇಳೆ ಶೋಷಿಸಿದರೆ ಅದಕ್ಕೆ ತಕ್ಕ ಪ್ರತಿಫಲ ಗ್ರಾಮ ದೇವತೆ ನೀಡುತ್ತಾಳೆ. ಶೋಷಣೆಗೆ ಒಳಪಡಿಸಿದವರ ಶೋಷಿಸಿದವರ ಅಭಿವೃದ್ಧಿ ಹೊಂದಲು ಸಾಧ್ಯವಾಗುವುದಿಲ್ಲ. ಹಾಗೂ ಕೆಡಕಾಗುತ್ತದೆ ಎಂಬ ಪರಿಕಲ್ಪನೆಯನ್ನು ಗ್ರಾಮ ದೇವತೆಗಳ ಪಾರಂಪರಿಕ ಜಾನಪದೀಯ ಸಂಶೋಧನೆಯು ತಿಳಿಸುತ್ತದೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಗ್ರಾಮ ದೇವತೆಗಳ ಪಾರಂಪರಿಕ ಜಾನಪದೀಯ ಸಂಸ್ಕೃತಿ ನಮ್ಮಲ್ಲಿ ಸಹ ಬಾಳುವ ಸಹೋದರ ಭಾವ, ಪ್ರೀತಿ, ವಿಶ್ವಾಸವನ್ನು ಮಾನಸಿಕ ಧೈರ್ಯ ದೃಷ್ಟಿ ಮಾರ್ಗವನ್ನು ಹಿಡಿಯದೆ ಸನ್ಮಾರ್ಗದಲ್ಲಿ ನಡೆಯಬೇಕು ಎನ್ನುವ ಸತ್ವಯುಕ್ತ ಸಂದೇಶವನ್ನು ಸಾರುತ್ತದೆ.

ಗ್ರಾಮ ದೇವತೆಗಳ ಹೆಸರಿನಲ್ಲಿ ಗ್ರಾಮ ಸಮುದಾಯದ ಜನ ಆಚರಣೆಗಳ ಆಚರಣೆಗಳಗಾಗಿ ಹೆಚ್ಚು ಹಣವನ್ನು ಖರ್ಚು ಮಾಡಿ ಸಾಲ ಸೋಲದ ಸೂಳಿಗೆ ಸಿಲುಕಿ ಒದ್ದಾಡುವುದನ್ನು ನಿಲ್ಲಿಸುವುದರ ಕಡೆಗೆ ಸರ್ಕಾರ ಸರ್ಕಾರೇತರ ಸಂಸ್ಥೆಗಳು ಹಾಗೂ ಪ್ರಗತಿಪರ ಸಂಘಟನೆಗಳು ಅವರಲ್ಲಿ ಅರಿವು ಮೂಡಿಸುವ ಹೆಸರಿನಲ್ಲಿ ಅವರ ಸಾಂಸ್ಕೃತಿಕ ಪರಂಪರೆಯನ್ನು ತಡೆಯುವುದನ್ನು ನಿಲ್ಲಸದಿರಲಿ ಎಂಬುದನ್ನು ಅಭಿವೃದ್ಧಿಯ ಪರಿಕಲ್ಪನೆಯನ್ನು ಈ ಸಂಶೋಧನೆಯ ಲೇಖನ ಸಾರುತ್ತದೆ.

**ವಕ್ತೃಗಳ ವಿವರ :**

1). ಸಂಪತ್ ಕುಮಾರ್

ಬಿಲ್ಲೇನಹಳ್ಳಿ, ಗವಿರಂಗನಾಥಸ್ವಾಮಿ ಅರ್ಚಕರು,

ಜಾತಿ : ಲಿಂಗಾಯತ

ವಯಸ್ಸು : 68

2. ಜಗದೀಶ್ ಕುಮಾರ್ ಎಸ್. ಬಿ.

ಕುಂದೂರು ಶ್ರೀ ವೀರಭದ್ರಸ್ವಾಮಿ ದೇವಸ್ಥಾನದ ಅರ್ಚಕರು,

ಕೆ.ಆರ್. ಪೇಟೆ ತಾಲ್ಲೂಕು,

ಜಾತಿ : ಲಿಂಗಾಯತ

ವಯಸ್ಸು : 50

3. ವೆಂಕಟೇಶಮೂರ್ತಿ ಎಸ್.ವಿ.

ಶೀಳನೆರೆ, ಶೀಳನೆರೆ ಹೋಬಳಿ, ಕೆ.ಆರ್. ಪೇಟೆ ತಾಲ್ಲೂಕು,

ತಿರುಮಲ ದೇವಸ್ಥಾನದ ಅರ್ಚಕರು,

ಜಾತಿ : ಲಿಂಗಾಯತ

ವಯಸ್ಸು : 60

4. ರವಿಚಂದ್ರ ಎಸ್.ಬಿ.

ಕೊರಟಿಕೆರೆ, ಕೆ.ಆರ್. ಪೇಟೆ ತಾಲ್ಲೂಕು,

ಈಶ್ವರ, ಲಕ್ಷ್ಮಿದೇವಿ, ಆಂಜನೇಯಸ್ವಾಮಿ ದೇವಸ್ಥಾನದ ಅರ್ಚಕರು,

ಜಾತಿ : ಲಿಂಗಾಯತ

ವಯಸ್ಸು : 45